





# ನಾಯಕರಿಗೆ ದೆವ್ವದ ಕಾಟ!

ಒಂದರ ಹಿಂದೊಂದು ಕನ್ನಡ ಚಿತ್ರಗಳು ಗೆಲುವಿನ ದಡ ಸೇರುತ್ತಿರುವ ದಿನಗಳಿವು. ಕೆಲವರ ಮಾತಿನಲ್ಲಿ ಹೇಳುವುದಾದರೆ, ಇದು 'ಕನ್ನಡ ಚಿತ್ರಗಳ ಚೈತ್ರಕಾಲ'. ಅಂದ ಹಾಗೆ, ಈ ಚೈತ್ರದ ಕೇಂದ್ರದಲ್ಲಿ ಇರುವುದು ಯಾರು? ಯುವ ನಿರ್ದೇಶಕರು ಎಂದು ಮೇಲ್ನೋಟಕ್ಕೆ ಹೇಳಬಹುದಾದರೂ, ಮತ್ತಷ್ಟು ಕೆದಕಿ ನೋಡಿದಾಗ ದೊರೆಯುವ ಉತ್ತರ– ದೆವ್ವ!

ದರ್ಶನ್, ಪುನೀತ್, ಸುದೀಪ್, ಯಶ್, ಗಣೇಶ್ – ಗೆಲುವು ಯಾರಿಗೂ ಸುಲಭವಲ್ಲ ಎನ್ನುವಂಥ ದಿನಗಳಿವು. 'ಬಾಕ್ಸಾಫೀಸ್ ಸುಲ್ತಾನ್' ಎಂದು ಕರೆಸಿಕೊಳ್ಳುವ ದರ್ಶನ್ ತಮ್ಮನ್ನು ತಾವು 'ಫ್ಲಾಪ್ ಸ್ಟಾರ್' ಎಂದು ಇತ್ತೀಚೆಗೆ ಕರೆದುಕೊಂಡಿದ್ದರಲ್ಲಿ ವ್ಯಂಗ್ಯದ ಜೊತೆಗೆ, ಕೊಂಚ ಸತ್ಯವೂ ಇರುವುದನ್ನು ಅಲ್ಲಗಳೆಯುವಂತಿಲ್ಲ. 'ಜಗ್ಗುದಾದ' ಚಿತ್ರದಲ್ಲಿ ದರ್ಶನ್ ಜೊತೆಗೆ ದೆವ್ವದ ಕಾಮಿಡಿಯೂ ಇರುವುದನ್ನು ಗಮನಿಸಬೇಕು.

ಇವತ್ತಿನ ಸಂದರ್ಭವನ್ನು ನೋಡಿ: ಮಕ್ಕಳಿಗೂ ಹೆಣ್ಣುಮಕ್ಕಳಿಗೂ ಹಿರಿಯರಿಗೂ ಇಷ್ಟವಾಗುವ ಪುನೀತ್ ತಮ್ಮದೇ ಆಯ್ಕೆಗಳ 'ಚಕ್ರವ್ಯೂಹ'ದಲ್ಲಿ ಸಿಕ್ಕಿಕೊಂಡಿದ್ದಾರೆ. 'ಜೂಮ್'ನಂಥ ಚಿತ್ರ ತೆರೆಗೆ ಬರಲು ಮೀನಮೇಷ ಎಣಿಸಬೇಕಾದ ಸಂಕಷ್ಟ ಗಣೇಶ್ ಅವರದು. ಸುದೀಪ್ ಕೂಡ ಸೇಫ್ ಬೆಟ್ ಎನ್ನುವಂತಿಲ್ಲ. 'ರನ್ನ' ಸಿನಿಮಾ ಹೆಚ್ಚು ಸುದ್ದಿ ಮಾಡಿದ್ದು ಮಾಧ್ಯಮಗಳಲ್ಲೇ ಹೊರತು ಬಾಕ್ಸಾಫೀಸ್‌ನಲ್ಲಲ್ಲ! ಯಶ್‌ರ 'ಮಾಸ್ಟರ್‌ಪೀಸ್' ಕೂಡ ನಿರೀಕ್ಷಿತ ಗೆಲುವು ಸಾಧಿಸಲಿಲ್ಲ. ಇತ್ತೀಚಿನ ಯಶಸ್ವಿ ಚಿತ್ರಗಳಲ್ಲಿ ಶಿವರಾಜಕುಮಾರ್ ಅವರ 'ಶಿವಲಿಂಗ' ಮುಖ್ಯವಾದುದು. ಆದರೆ, ಈ ಚಿತ್ರ ಕೂಡ 'ದೆವ್ವ'ದ ಸಖ್ಯದಿಂದ ಮುಕ್ತವಾದುದೇನೂ ಅಲ್ಲ. ಹಾಗಾಗಿ, ಆ ಚಿತ್ರದ ಕ್ರೆಡಿಟ್ ದೆವ್ವಕ್ಕೆ ಕೂಡ ಸಲ್ಲಬೇಕು! ಉಪೇಂದ್ರ ಅವರಂತೂ 'ಕಲ್ಪನಾ' ಸಖ್ಯ ಮಾಡಿ ಬಹಳ ಕಾಲವಾಯಿತು. ನಾಯಕರೆಲ್ಲ ಕೈಕೊಟ್ಟ ಸಂದರ್ಭದಲ್ಲಿ ಗಾಂಧಿನಗರದ ಪಾಲಿಗೆ ದೆವ್ವಗಳು 'ಆಪ್ತಮಿತ್ರ'ನಂತೆ ಕಾಣಿಸಿರುವುದರಲ್ಲಿ ಆಶ್ಚರ್ಯವಿಲ್ಲ.

ಗಾಂಧಿನಗರದ ದೆವ್ವಗಳ ಒಲವನ್ನು ನಿರ್ದೇಶಕ ಯೋಗರಾಜ ಭಟ್ ಬಣ್ಣಿಸುವುದು– 'ತುಟ್ಟಿ ದೆವ್ವಕ್ಕಿಂತ ಬಿಟ್ಟಿ ದೆವ್ವ ವಾಸಿ'. ಭಟ್ಟರ ಈ ಮಾತು ನಾಯಕ ನಟರು ನಿರ್ಮಾಪಕರ ಪಾಲಿಗೆ 'ಹೊರೆ' ಆಗಿರುವುದನ್ನೂ ಸೂಚಿಸುವಂತಿದೆ. ವೈರುಧ್ಯ ನೋಡಿ: ಒಂದೆಡೆ ಸಿನಿಮಾಗಳು ಸೋಲುತ್ತಿದ್ದರೂ ತಾರೆಗಳ ಸಂಭಾವನೆಯೇನೂ ಇಳಿಮುಖವಾಗಿಲ್ಲ. ಒಂದರಿಂದ ನಾಲ್ಕೈದು ಕೋಟಿ ರೂಪಾಯಿವರೆಗೆ ಪ್ರಮುಖ ನಾಯಕರ ಸಂಭಾವನೆ ತೂಗುತ್ತಿದೆ. ಸೋಲಿನ ಹೊಣೆಯನ್ನು ಹೊರಬೇಕಾದ ಔದಾರ್ಯವನ್ನು ಈ ನಾಯಕರು ತೋರಿಸಿರುವುದು ಕಡಿಮೆ. ಗಾಂಧಿನಗರದಲ್ಲಿ ಸಾಂಪ್ರದಾಯಿಕ ನಿರ್ಮಾಪಕರ ಸಂಖ್ಯೆ ಹೆಚ್ಚೂಕಡಿಮೆ ಕ್ಷೀಣಿಸಿರುವ ಹಿನ್ನೆಲೆಯಲ್ಲಿ 'ನಾಯಕರ ಮಹಾತ್ಮೆ' ಇಲ್ಲದಿಲ್ಲ.

ನಾಯಕರು ಕೈಗೆಟುಕದ ಮೇಲೆ ನಿರ್ಮಾಪಕರು ತಾನೆ ಏನು ಮಾಡಿಯಾರು? ಪ್ರತಿನಾಯಕರ ಹುಡುಕಾಟದಲ್ಲಿದ್ದ ಅವರ ಕೈಗೆ ಸುಲಭವಾಗಿ ಸಿಕ್ಕಿರುವುದು ದೆವ್ವಗಳು. ಅವುಗಳು ನೇತಾಡಿಕೊಂಡಿರಲು ಬೇಕಾಗಿದ್ದ ಮರಗಳ ಸಂಖ್ಯೆ ವಿರಳವಾಗಿರುವುದರಿಂದ, ದೆವ್ವಗಳಿಗೆ ಕೂಡ ಬೆಳ್ಳಿತೆರೆ ಹೊಸಮನೆಯ ರೂಪದಲ್ಲಿ ಆಪ್ಯಾಯಮಾನವಾಗಿ ಕಂಡಿರಬಹುದು!

ಒಂದಂತೂ ನಿಜ. ನಮ್ಮ ನಾಯಕ ಮಹಾಶಯರು ಈಗಲಾದರೂ ಎಚ್ಚತ್ತುಕೊಳ್ಳದೆ ಹೋದರೆ ತಮ್ಮ ವರ್ಚಸ್ಸಿಗೆ ತಾವೇ ಚಪ್ಪಡಿ ಎಳೆದುಕೊಳ್ಳುವುದಂತೂ ಸ್ಪಷ್ಟ. ಅವರು ಸದ್ಯಕ್ಕೆ ಮಾಡಬೇಕಿರುವುದು ಎರಡು ಕೆಲಸ: ಒಂದು ನಿರ್ಮಾಪಕರನ್ನು ಸಹಾನುಭೂತಿಯಿಂದ ನೋಡುವುದು. ಮತ್ತೊಂದು ಕಥೆಗಳ ಬಗ್ಗೆ ಹೆಚ್ಚು ಗಮನಹರಿಸುವುದು. 'ಕಥೆಯೇ ಸಿನಿಮಾದ ನಿಜ ನಾಯಕ' ಎಂದು ಪ್ರೇಕ್ಷಕರು ಹೇಳಿಯಾಗಿದೆ. ಅದನ್ನು ಚಿತ್ರೋದ್ಯಮ ಒಪ್ಪದೆ ವಿಧಿಯಿಲ್ಲ.

■ ರಘು